ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ:– ನಮ್ಮ ಜಿಲ್ಲೆಗೆ in charge ಮದಕರಿನಾಯಕನಂತಹವರು ಯಾರೂ ಇಲ್ಲ. ಸಧ್ಯಕ್ಕೆ ನಮ್ಮ ಜಿಲ್ಲೆಗೆ ಮದಕರಿನಾಯಕನಂತಹ ಮಂತ್ರಿಗಳು ಇಲ್ಲವೆಂದು ಹೇಳಿದೆ.

ಅಧ್ಯಕ್ಷರು:– ಇನ್ನೂ ಒಂದು ಕುಟುಂಬ ಅಲ್ಲಿಯೇ ಇದೆ. ಡಾ॥ ಅಜಯ್ ಸಿಂಗ್.

ಜೇವರ್ಗಿ ತಾಲ್ಲೂಕಿಗೆ ಟ್ರಾಫಿಕ್ ಪೊಲೀಸ್ ಠಾಣೆ

175 (3135); ಡಾ॥ ಅಜಯ್ ಸಿಂಗ್ (ಜೇವರ್ಗಿ)

ಅ) ಜೇವರ್ಗಿ ತಾಲ್ಲೂಕಿನಲ್ಲಿ 2 ರಾಷ್ಟ್ರೀಯ ಹೆದ್ದಾರಿ ಹಾದು ಹೋಗುತ್ತಿರುವ ಸ್ಥಳದಲ್ಲಿ ಅಪಘಾತ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ತಾಲ್ಲೂಕಿಗೆ ಸಂಚಾರಿ ಪೊಲೀಸ್ ಠಾಣೆ ಮಂಜೂರಾತಿ ಮಾಡಿ ಅಪಘಾತಗಳನ್ನು ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮವೇನು;

ಇ) ಹಾಗಿದ್ದಲ್ಲಿ, ಸಂಚಾರಿ ಪೊಲೀಸ್ ಠಾಣೆ ಮಂಜೂರಾತಿ ಮಾಡಲು ಬೇಕಾಗುವ ಅವಧಿ ಎಷ್ಟು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಹೌದು.

ಆ) ಜೇವರ್ಗಿ ಠಾಣಾ ವ್ಯಾಪ್ತಿಯಲ್ಲಿ ಅಪಘಾತ ಪ್ರಕರಣಗಳು ಈ ಕೆಳಗಿನಂತೆ ವರದಿಯಾಗಿರುತ್ತದೆ.

ರಸ್ತೆ ಅಪಘಾತ ಪ್ರಕರಣಗಳು (ಜೇವರ್ಗಿ ಪೊಲೀಸ್ ಠಾಣೆ)

ವರ್ಷ	ಘೋರ	ಸಾಧಾರಣ	ಮರಣ	ಗಾಯಾಳುಗಳು
2012	11	34	02	46
2013	06	24	05	24
2014	12	37	15	54
2015 (ಮೇ)	09	28	12	30

ಪೊಲೀಸ್ ಆಯೋಗವು ನಿಗಧಿಪಡಿಸಿರುವ ಸಂಖ್ಯೆಗಿಂತ ಅಪಘಾತಗಳ ಸಂಖ್ಯೆಯು ಕಡಿಮೆ ಇದ್ದು, ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯಲು ರಾಷ್ಟ್ರೀಯ ಪೊಲೀಸ್ ಆಯೋಗವು ನಿಗಧಿಪಡಿಸಿರುವ ಮಾನದಂಡಗಳನ್ನು ಪೂರೈಸಿರುವುದಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸುತ್ತಿರುವ ಅಪಘಾತಗಳನ್ನು ತಡೆಯುವ ಸಂಬಂಧ ಕಟ್ಟುನಿಟ್ಟಾಗಿ ಕ್ರಮಕೈಗೊಳ್ಳುವಂತೆ ಭಾರತ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ರವರಿಗೆ ಸೂಚಿಸಲಾಗಿದೆ.

ಇ) ಜೇವರ್ಗಿ ತಾಲ್ಲೂಕಿನಲ್ಲಿ ಪ್ರತ್ಯೇಕ ಸಂಚಾರಿ ಪೊಲೀಸ್ ಠಾಣೆ ತೆರೆಯುವ ಕುರಿತು ಅವಶ್ಯಕತೆ ಕಂಡುಬಂದಲ್ಲಿ ಇಲಾಖೆಯಿಂದ ಪ್ರಸ್ತಾವನೆಯನ್ನು ಪಡೆದು ಆಯವ್ಯಯದ ಲಭ್ಯತೆ ಮತ್ತು ಆದ್ಯತೆ ಮೇರೆಗೆ ಪರಿಶೀಲಿಸಲಾಗುವುದು.

ಡಾ॥ ಅಜಯ್ ಸಿಂಗ್:– ಮಾನ್ಯ ಅಧ್ಯಕ್ಷರೆ, ನಾನು ಶಾಸಕನಾದ ನಂತರ ಮೊಟ್ಟ ಮೊದಲನೇ ಬಾರಿಗೆ ಸನ್ಮಾನ್ಯ ಗೃಹ ಸಚಿವರಿಗೆ ಒಂದು ಅರ್ಜಿ ಕೂಡ ಕೊಟ್ಟಿದ್ದೆ. ನಾವು ಗುಲ್ಬರ್ಗದಿಂದ ಜೇವರ್ಗಿಗೆ ಹೋಗಬೇಕೆಂದರೆ. ಕನಿಷ್ಟ ಒಂದು ಗಂಟೆಯಾಗುತ್ತಿತ್ತು. ಆದರೆ ಈಗ ಕೇವಲ 35 ನಿಮಿಷದಲ್ಲಿ ನಾವು ಹೋಗಬಹುದು. ಅಲ್ಲಿರತಕ್ಕಂತಹ ಸಮಸ್ಯೆ ಏನೆಂದರೆ, ಮಾನ್ಯ ಗೃಹ ಸಚಿವರು ಕೂಡ ತಮ್ಮ ಉತ್ತರದಲ್ಲಿ ಅಲ್ಲಿ Traffic

Police Station ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ. ಆದರೆ ನಮ್ಮ ಜೇವರ್ಗಿ ತಾಲ್ಲೂಕು ಇವತ್ತಿನ ದಿವಸ ಸುಮಾರು ಮೂರು ಜಿಲ್ಲೆಗಳ ಮಧ್ಯದಲ್ಲಿದೆ. ಗುಲ್ಬರ್ಗ, ಯಾದಗಿರಿನಲ್ಲಿ, ಎರಡು ಮೂರು ದಿವಸಕ್ಕೆ ಒಂದು accident ಆಗುತ್ತಿರುತ್ತದೆ. ಅದಕ್ಕಾಗಿ ಒಂದು Traffic Police Station ಮಾಡಿಕೊಡಬೇಕು. ಈಗಾಗಲೇ ಮಾನ್ಯ ಸಭಾಧ್ಯಕ್ಷರೆ, ಹಮನಾಬಾದ್, ಕಲ್ಬುರ್ಗಿ ಬಿಜಾಪುರದ ತನಕ ರಸ್ತೆ ಇದ್ದುದು ಮೇಲ್ದರ್ಜೆಗೇರಿಸಿದ್ದಾರೆ ಅದಕ್ಕಾಗಿ ಅಲ್ಲಿ ನಮಗೆ Traffic Police ಆಗಬೇಕಾಗಿದೆ.

ಅಧ್ಯಕ್ಷರು:– ಒಬ್ಬ ಮುಖ್ಯ ಮಂತ್ರಿನೇ ಹುಟ್ಟಿ ಬಂದಿದ್ದಾರಲ್ಲರಿ ಅಲ್ಲಿ.

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಅಧ್ಯಕ್ಷರೆ, ಡಾ॥ ಅಜಯ್ ಸಿಂಗ್‌ರವರ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಕಷ್ಟು accident ಗಳು ಆಗುತ್ತಿವೆ ಎಂದು ಹೇಳಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ಹಲವಾರು ಕ್ರಮಗಳನ್ನು ನಾವು ತೆಗೆದುಕೊಳ್ಳಬೇಕಾಗಿದೆ. ಬರೀ police station ಸ್ಥಾಪನೆ ಮಾಡಿದರೆ ಮಾತ್ರ ಆಗುವುದಿಲ್ಲ. ಅದು ರಾಷ್ಟ್ರೀಯ ಪೊಲೀಸ್ ಆಯೋಗದ ಮಾನದಂಡದ ಪ್ರಕಾರ ಆದ್ಯತೆ ಮೇಲೆ ಮಾಡುತ್ತೇವೆ. District ನಲ್ಲಿ D C ಕೆಳಗೆ ಸುರಕ್ಷಾ ಸಮಿತಿ ಎಂದು ಒಂದು ಇದೆ. ಅವರು ಏನು ಮಾಡಬೇಕು National Highway authority ಯವರು ಹಾಗೂ PWD ಯವರು ಸೇರಿ ಮೀಟಿಂಗ್ ಮಾಡಿ ಇಂತಹ black spots ಮಾಡಬೇಕಾಗುತ್ತದೆ. Main problem National Highway ಹಾದು ಹೋಗುತ್ತಿದೆ. ಅಲ್ಲಿ ಬೈ ಪಾಸ್ ಬೇಕಾಗಿದೆ. ಈ ವರ್ಷ ಪೆಟ್ರೋಲ್ ವೆಹಿಕಲ್ಸ್ ಜಾಸ್ತಿ ಮಾಡುತ್ತಿದ್ದೇವೆ. ಬ್ಯಾರಿಕೇಡ್ ಹಾಕಿ ಎಚ್ಚರಿಕೆ ಕೊಡಬೇಕೆಂದು ನಾವು ಸೂಚನೆ ಕೊಟ್ಟಿದ್ದೇವೆ. ಆದರೂ police station ಬೇಕೆಂದು ಹೇಳಿದ್ದಾರೆ, ನಾವು ಅದನ್ನು ಆದ್ಯತೆ ಕೊಟ್ಟು ಮಾಡುತ್ತೇವೆ.

ಡಾ॥ ಅಜಯ್ ಸಿಂಗ್:– ಮಾನ್ಯ ಅಧ್ಯಕ್ಷರೆ, ಬೈ ಪಾಸ್ ಅಂತೂ ಆಗುತ್ತದೆ. ಆದರೆ ರಸ್ತೆಗಳ ಅಪಘಾತ ಏನಾಗುತ್ತದೆ, 2012 ರಲ್ಲಿ ಸುಮಾರು 95 ಕೇಸ್‌ಗಳು 2013ರಲ್ಲಿ 104, 2014ರಲ್ಲಿ ಸುಮಾರು 154, ಈಗ ಆರೇ ತಿಂಗಳಲ್ಲಿ ಸುಮಾರು 95 ಕೇಸ್‌ಗಳು ಆಗಿವೆ. ಅದಕ್ಕಾಗಿ ತಾವು ಹೆಚ್ಚಿನ

ಗಮನ ಕೊಟ್ಟು traffic police station ಮಾಡಿ ಕೊಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ.

ಶ್ರೀ ಕೆ.ಜೆ. ಜಾರ್ಜ್:– ಜಿಲ್ಲಾ ಸುರಕ್ಷಾ ಸಮಿತಿಯಲ್ಲಿ ಇದನ್ನು ತೆಗೆದುಕೊಳ್ಳುತ್ತೇವೆ. PWD ಇಲಾಖೆಯವರಿಗೂ ಹೇಳಿ ಆದಷ್ಟು ಬೇಗ ಬೈ ಪಾಸ್ ರೋಡ್ ಪೂರ್ಣ ಮಾಡುವಂತೆ ಹೇಳುತ್ತೇವೆ.

ಅಧ್ಯಕ್ಷರು:– ಶಿವಶಂಕರ್.

ಪ್ರಾಧಿಕಾರದಿಂದ ನಿವೇಶನಗಳ ಹಂಚಿಕೆ

176 (3248); ಶ್ರೀ ಶಿವಶಂಕರ್ ಹೆಚ್.ಎಸ್. (ಹರಿಹರ)

ಅ) ದಾವಣಗೆರೆ–ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಿಸಿರುವ ಜೆ.ಹೆಚ್. ಪಟೇಲ್ ಬಡಾವಣೆಯನ್ನು ಯಾವಾಗ ನಿರ್ಮಿಸಲಾಯಿತು;

ಆ) ಎಷ್ಟು ಎಕರೆಯಲ್ಲಿ ಪ್ರಾಧಿಕಾರವು ನಿವೇಶನಗಳನ್ನು ಅಭಿವೃದ್ಧಿ ಪಡಿಸಿದೆ; ಯಾವ ಯಾವ ಅಳತೆಯ ನಿವೇಶನಗಳಿವೆ;

ಇ) ಹಾಗಿದ್ದಲ್ಲಿ, ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ; ಎಷ್ಟು ನಿವೇಶನಗಳು ಖಾಲಿ ಇವೆ;

ಈ) ಖಾಲಿ ಇರುವ ನಿವೇಶನಗಳ ಹಂಚಿಕೆಗೆ ಇರುವ ಮಾನದಂಡಗಳೇನು; ನಿವೇಶನಗಳ ಹಂಚಿಕೆ ಮಾಡಲು ಪ್ರಾಧಿಕಾರದ ತೀರ್ಮಾನ ಮತ್ತು ಅಳವಡಿಸಿಕೊಂಡಿರುವ ಪದ್ಧತಿಗಳೇನು;

ಉ) ಖಾಲಿ ಇರುವ ನಿವೇಶನಗಳನ್ನು ಈವರೆಗೆ ಹಂಚಿಕೆ ಮಾಡದಿರಲು ಕಾರಣಗಳೇನು (ವಿವರ ನೀಡುವುದು)?

ಶ್ರೀ ವಿನಯ ಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಶ್ರೀ ಜೆ.ಹೆಚ್. ಪಟೇಲ್ ಬಡಾವಣೆಯ ಮೊದಲನೆ ಹಂತದ ಯೋಜನೆಯನ್ನು 2001–02ನೇ ಸಾಲಿನಲ್ಲಿ ನಿರ್ಮಿಸಲಾಗಿದೆ.